ಇಂದು ದಿನಾಂಕಃ 12.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿಯ ಪರ ಶ್ರೀ ಕೆ ಬಿ ಬಿ ವಕೀಲರಿಂದಃ

ನನ್ನ ಅಜ್ಜನ ಹೆಸರು ಕಲ್ಲಪ್ಪ. ಕಲ್ಲಪ್ಪ ರವರ ತಂದೆಯ ಹೆಸರು ಶಿವನಗೌಡ. ನನ್ನ ಅಜ್ಜನ ಅಣ್ಣ ತಮ್ಮಂದಿರು 3 ಜನ. ನನ್ನ ಅಜ್ಜ ಕಲ್ಲಪ್ಪ ರವರು 4 ಜನ ಅಣ್ಣ ತಮ್ಮಂದಿರು ಇದ್ದು ಅವರೆಂದರೆ ಕಲ್ಲಪ್ಪ, ಸಿದ್ದಲಿಂಗಪ್ಪ, ಹಾಲಪ್ಪ, ಮಾದೇವಪ್ಪ ಎಂದರೆ ಸರಿಯಲ್ಲ. 28 ಗುಂಟೆ ಜಮೀನನ್ನು ಚನ್ನಬಸಪ್ಪ ರವರು ಬಸಲಿಂಗಪ್ಪ ಮರ್ಕಳ್ಳಿ ರವರಿಗೆ ವಿಭಾಗದಿಂದ ಬಂದಿರುತ್ತದೆ. ಆ ರೀತಿ ವಿಬಾಗ ಆಗಿರುವ ಬಗ್ಗೆ ದಾಖಲೆಗಳನ್ನು ಹಾಜರಪಡಿಸಿದ್ದೀರಾ ಎಂದರೆ ನನ್ನ ಬಳಿ ಇದ್ದಂತಹ ಎಲ್ಲಾ ದಾಖಲೆಗಳನ್ನು ನೀಡಿರುತ್ತೇನೆ ಎಂದು ನುಡಿರುತ್ತಾರೆ. ಸದರಿ ಆಸ್ತಿ ಚನ್ನಬಸಪ್ಪ ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಚನ್ನಬಸಪ್ಪ ರವರ ಹೆಸರಿನಲ್ಲಿ ಪ್ರಸ್ತುತ 6 ಗುಂಟೆ ಜಮೀನು ಇರುತ್ತದೆ. ಅದರ ಚಕ್ಕಬಂದಿ ಎಂದರೆ ಪೂರ್ವಕ್ಕೆ ಪಿ ಡಬ್ಲೂ ಡಿ ರಸ್ತೆ, ಪಶ್ಚಿಮಕ್ಕೆ ಗದಿಗಪ್ಪ ಮರ್ಕಳ್ಳಿ ರವರ ಜಮೀನು, ಉತ್ತರಕ್ಕೆ ಸುಭಾಶ ಒಡ್ಡಿನಕಟ್ಟಿ ರವರ ಜಮೀನು, ದಕ್ಷಿಣಕ್ಕೆ ಪಂಚಾಯತಿಯ ಮುಖ್ಯ ರಸ್ತೆ ಇರುತ್ತದೆ. ಸದರಿ ಚಕ್ಕಬಂದಿ ಸುಳ್ಳು ಎಂದರೆ ಸರಿಯಲ್ಲ. ಸದರಿ 6 ಗುಂಟೆ ಜಮೀನಿನಲ್ಲಿ 3 ಗುಂಟೆ ಜಮೀನು ಚನ್ನಬಸಪ್ಪ ಕಲ್ಲಪ್ಪ ಮರ್ಕಳ್ಳಿ ರವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು 6 ಗುಂಟೆ ಜಮೀನು ಇದೆ ಎಂದು ನುಡಿದಿರುತ್ತಾರೆ. ಸದರಿ 3 ಗುಂಟೆಯ ಜಮೀನಿನ ಚಕ್ಕಬಂದಿ ಎಂದರೆ ಪೂರ್ವಕ್ಕೆ ಪಿ.ಡಬ್ಲೂ.ಡಿ ರಸ್ತೆ, ಪಶ್ಚಿಮಕ್ಕೆ ಗದಿಗೆಪ್ಪ ಮರ್ಕಳ್ಳಿ ರವರ ಜಮೀನು, ಉತ್ತರಕ್ಕೆ ಸುಭಾಶ ಒಡ್ಡಿನಗಕಟ್ಟಿ ರವರ ಜಮೀನು, ದಕ್ಷಿಣಕ್ಕೆ ವಾದಿಯರ 3 ಗುಂಟೆ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ 3 ಗುಂಟೆ ಜಮೀನನ್ನು ಚನ್ನಬಸಪ್ಪ ಕಲ್ಲಪ್ಪ ಮರ್ಕಳ್ಳಿ ರವರು 1977 ರಲ್ಲಿ ಎನ್ ಎ ಮಾಡಿಸಿಕೊಂಡಿರುತ್ತಾರೆ ಎದರೆ ಸಾಕ್ಷಿಯು ಅವರು 3 ಗುಂಟೆ ಜಮೀನನ್ನು ಎನ್ ಎ ಮಾಡಿಸಿಕೊಂಡಿದ್ದು ಹೌದು ಉಳಿದ 3 ಗುಂಟೆ ಜಮೀನನ್ನು ಶೇಖಪ್ಪ ಕಲ್ಲಪ್ಪ ಮರ್ಕಳ್ಳಿ ರವರಿಗೆ ಬಿಟ್ಟು ಕೊಟ್ಟಿದ್ದು ಸದರಿ ಜಾಗದಲ್ಲಿ ಶೇಖಪ್ಪ ರವರು ದನ ಕರುಗಳನ್ನು ಕಟ್ಟಿ ಹಾಕುತ್ತಿದ್ದರು, ಈಗ ಶೇಖಪ್ಪನ ಮಕ್ಕಳಾದ ನಾವು ಮನೆಯನ್ನು ಕಟ್ಟಿಕೊಂಡು ವಾಸವಾಗಿರುತ್ತೇವೆ.

2. ಆ ರೀತಿ ನಾವು ಮನೆಯನ್ನು ಕಟ್ಟಿ 20 ವರ್ಷ ಆಗಿರಬಹುದು. ಆ ಬಗ್ಗೆ ನಾನು ಕಂದಾಯವನ್ನು ಪಾವತಿ ಮಾಡುತ್ತಿದ್ದೇನೆ. ಸಾಕ್ಷಿಯು ಮುಂದುವರೆದು ಸದರಿ 6 ಗುಂಟೆ ಜಮೀನಿನಲ್ಲಿ ಪಂಚಾಯತಿ ಆಸ್ತಿ ಸಂಖ್ಯೆ 402, 403 ಹಾಗೂ 404 ರಂತೆ ವಿಭಾಗಗೊಂಡಿದ್ದು ಅವುಗಳಿಗೆ ಸಂಬಂದಪಟ್ಟ ಎಲ್ಲಾ ದಾಖಲೆಗಳು ಇದಿದ್ದು ಸದರಿ ಆಸ್ತಿಗಳಿಗೆ ನಾವು ತೆರಿಗೆಯನ್ನು ಪಾವತಿ ಮಾಡುತ್ತಿದ್ದೇವೆ ಎಂದು ನುಡಿದಿರುತ್ತಾರೆ. ಅದೇ ರೀತಿ ಆಸ್ತಿ ಸಂಖ್ಯೆ 402/5, 402/5 ರಂತೆ 2 ಆಸ್ತಿಗಳು ವಾದಿಯರ ಹೆಸರಿನಲ್ಲಿ ಇರುತ್ತವೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ.

3. ಹಾಲಪ್ಪ ರವರಿಗೆ ಇದ್ದಂತಹ 3 ಗುಂಟೆ ಆಸ್ತಿ ಮೃತ್ಯು ಶಾಸನ ಪ್ರಕಾರ 3 ನೇ ವಾದಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಮೃತ್ಯು ಶಾಸನ ದಿನಾಂಕ 26-08-1989 ರಲ್ಲಿ ನೋಂದಾಗಿರುತ್ತದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಂತರ ದಿನಾಂಕ 03-07-1996 ರಲ್ಲಿ ಚನ್ನಬಸಪ್ಪ ಕಲ್ಲಪ್ಪ ಮರ್ಕಳ್ಳಿ ರವರು ಕಲ್ಲೇಶ್ವ ದೇವಸ್ಥಾನಕ್ಕೆ ಸರ್ವೆನಂ. 2/2ಬ, 6 ಗುಂಟೆ ಜಮೀನನ್ನು ಮೃತ್ಯು ಪತ್ರದ ಮೂಲಕ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅದೇ ಜಮೀನೇ ಬೇರೆ ವಿವಾದಿತ ಜಮೀನೇ ಬೇರೆ ಎಂದು ನುಡಿದಿರುತ್ತಾರೆ. ಎನ್ ಎ ಮಾಡಿದ 3 ಗುಂಟೆ ಜಮೀನು ಸರಕಾರಿ ದಾಖಲೆಗಳಲ್ಲಿ ನಕಾಶೆಯಾಗಿದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಪ್ರಧಾನ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.